ಕಂಠೀರವ ಕ್ರೀಡಾಂಗಣದಲ್ಲಿ ಕ್ರೀಡೆಗಳನ್ನು ನಡೆಸಲಾಗುವುದಲ್ಲದೆ, ಸಾಂಸ್ಕೃತಿಕ ಕಾರ್ಯಕ್ರಮಗಳು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆಸಲಾಗುವುದು. ಈ ಸಂಬಂಧವಾಗಿ ದಿನಾಂಕ:04–07–2005ರಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಶಾಸಕರ ಭವನದ ಸಮ್ಮೇಳನ ಸಭಾಂಗಣದಲ್ಲಿ ಸಂಜೆ 6.30 ಗಂಟೆಯಿಂದ 8.00 ಗಂಟೆಯವರೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳ ಬಗ್ಗೆ ಅಭ್ಯಾಸ ಮಾಡಲು ವ್ಯವಸ್ಥೆ ಮಾಡಲಾಗಿದೆ. ಹಾಗೆಯೇ ದಿನಾಂಕ:05–07–2005 ರಿಂದ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಇಚ್ಛೆಯುಳ್ಳ ಸನ್ಮಾನ್ಯ ಸದಸ್ಯರುಗಳು ಆಯಾಯ ವಿಭಾಗದಲ್ಲಿ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಬಹುದು. ಇದಕ್ಕೆ ಸಂಬಂಧಪಟ್ಟಂತೆ ಲಘು ಪ್ರಕಟಣೆಯನ್ನು ಹೊರಡಿಸಲಾಗಿದೆ.

* * *

ಅಧ್ಯಕ್ಷರು : ಮಾನ್ಯ ಕಾಗೇರಿಯವರೆ, ತಾವು ಭಾಷಣವನ್ನು ಪ್ರಾರಂಭ ಮಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಅಧ್ಯಕ್ಷರೇ,. ..

ಶ್ರೀ ಬಿ.ಎಸ್.ಯಡಿಯೂರಪ್ಪ: ಅವರು ಒಂದು 10 ನಿಮಿಷಗಳ ಕಾಲ ಮಾತನಾಡಲಿ. ನಾವು ಸದನಕ್ಕೆ ಬಂದಿದ್ದೇವೆ. ಸದನವು 5 ಗಂಟೆಗೆ ಮುಗಿಯಬೇಕಾಗಿತ್ತು. ಅವರು ಭಾಷಣವನ್ನು ಪ್ರಾರಂಭ ಮಾಡಲಿ, ಅವರು ನಾಳೆಯೂ ಮುಂದುವರೆಸುತ್ತಾರೆ.

ಅಧ್ಯಕ್ಷರು: 6 ಗಂಟೆಯವರೆಗೂ ಕಲಾಪ ನಡೆಯಲಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಬೇಡಸಾರ್, 5.30 ಗಂಟೆಗೆ ಮುಗಿಸಿ. ನಾವು ಬೇರೆ ಕಾರ್ಯಕ್ರಮವನ್ನು ಒಪ್ಪಿಕೊಂಡಿದ್ದೇವೆ. ಅವರು 15 ನಿಮಿಷ ಮುಂದುವರೆಸುತ್ತಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಅಧ್ಯಕ್ಷರೇ, 11ನೇ ಮಾರ್ಚಿಗೆ 2005–06 ನೇ ಸಾಲಿನ ಆಯವ್ಯಯವನ್ನು ಮಾನ್ಯ ಹಣಕಾಸಿನ ಸಚಿವರಾದಂತ ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು 4 ತಿಂಗಳ ಒಂದು ಲೇಖಾನುದಾನವನ್ನು ಕೋರಿ ಈ ಎಲ್ಲಾ ಬೇಡಿಕೆಗಳನ್ನು ಮಂಡಿಸಿದ್ದಾರೆ. ಬೇಡಿಕೆ ಸಂಖ್ಯೆ: 1 ಕೃಷಿ ಮತ್ತು ತೋಟಗಾರಿಕೆ ಇಲಾಖೆಗೆ

ಸಂಬಂಧಪಟ್ಟಂತೆ ಮತ್ತು ಶಿಕ್ಷಣ ಇಲಾಖೆಯ ಕೆಲವು ವಿಷಯಗಳನ್ನು ಸಂಬಂಧಪಟ್ಟಂತೆ ನಾವು ಪ್ರಸ್ತಾಪಿಸಬೇಕೆಂದು ಈ ಸಂದರ್ಭದಲ್ಲಿ ನನಗೆ ಮಾತನಾಡುವುದಕ್ಕೆ ತಾವು ಅವಕಾಶವನ್ನು ಕೊಟ್ಟಿದ್ದೀರಿ, ಅದಕ್ಕಾಗಿ ನಾನು ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ನಾನು ಒಂದು ನ್ಯೂನತೆ ಮತ್ತು ದೋಷವನ್ನು ತಮ್ಮ ಮೂಲಕ ತಿಳಿಸುವುದಕ್ಕೆ ಬಯಸುತ್ತೇನೆ. ಇದು ಮುಂದಿನ ದಿನಗಳಲ್ಲಿ ಆಗಬಾರದು, ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ವಾರ್ಷಿಕ ವರದಿ ತಾವು ಅದನ್ನು ಶುಕ್ರವಾರದಿಂದ ಪಟ್ಟಿಯಲ್ಲಿ ಹಾಕುತ್ತಿದ್ದೀರಿ. ಆ ವಾರ್ಷಿಕ ವರದಿ ಈ ಕ್ಷಣದ ತನಕ ಅದು ನಮ್ಮ ಶಾಸಕರಿಗೆ ತಲುಪಲಿಲ್ಲ. ನಾನು ಅದನ್ನು ತರಿಸಿಕೊಂಡಿದ್ದೇನೆ ಅದು ಬೇರೆ. ಈಗ ಅದು ಸಚಿವಾಲಯಕ್ಕೆ ಬಂದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ವಾರ್ಷಿಕ ವರದಿ ತಮಗೆ ಅದು ಇನ್‌ಟೈಮ್‌ನಲ್ಲಿ ಬರುವುದಿಲ್ಲವೆಂದರೆ ನಮ್ಮ ಸದಸ್ಯರುಗಳಿಗೆ ಅದು ಸಿಗುವುದಿಲ್ಲವೆಂದರೆ ಬೇಡಿಕೆಗಳನ್ನು ಮಂಡಿಸಿದ ನಂತರವು ಅದು ಸಿಗುವುದಿಲ್ಲವೆಂದರೆ, ಅದನ್ನು ನಾವು ಹೇಗೆ ಸಮರ್ಪಕವಾಗಿ ಮಂಡಿಸುವುದಕ್ಕೆ ಸಾಧ್ಯ? ಕೃಷಿ ಸಚಿವರು ತಡವಾಗಿ ಬಂದು ಕ್ಷಮೆಯನ್ನು ಕೇಳಿರುವುದು ಒಂದು ಭಾಗ, ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ವಾರ್ಷಿಕ ವರದಿ ಸರಿಯಾದ ಸಮಯಕ್ಕೆ ಬಾರದೆ, ಅದು ಸರಿಯಾದ ಸಮಯಕ್ಕೆ ಸಿಗದೆ ಲಭ್ಯವಾಗದೆ ನಾವು ಸರಿಯಾಗಿ ಚರ್ಚೆಯಲ್ಲಿ ಪಾಲ್ಗೊಳ್ಳುವುದಕ್ಕೆ ಆಗದೆ ಇರುವಂತಹ ಸಂದರ್ಭ ಇದು ಆಗಬಾರದು. ಹಾಗಾಗಿ ದಯವಿಟ್ಟು ನಾನು ತಮ್ಮಲ್ಲಿ ಈ ಮೂಲಕವಾಗಿ ವಿನಂತಿಸಿ ಕೊಳ್ಳುತ್ತೇನೆ. ತಮ್ಮ ವತಿಯಿಂದ ಎಲ್ಲಾ ಇಲಾಖೆಗಳಿಗೂ ಅದು ವಾರ್ಷಿಕ ವರದಿ ಇರಬಹುದು, ಅಥವಾ ಹಣಕಾಸಿನ ನಿರ್ವಹಣೆಗೆ ಸಂಬಂಧಪಟ್ಟಂತೆ ವಿವರಗಳು ಕೂಡ ಇರಬಹುದು. ಆ ಎಲ್ಲಾ ವಿವರಗಳನ್ನು ಅವರು ಕಳುಹಿಸಿಕೊಡಬೇಕು, ತಾವು ಅದನ್ನು ಶಾಸಕರುಗಳ ಕೊಠಡಿಗಳಿಗೆ ಅದನ್ನು ತಲುಪಿಸುತ್ತೀರಿ, ಆ ವ್ಯವಸ್ಥೆಯು ಸಮರ್ಪಕವಾಗಿ ಆಗಬೇಕೆನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಕೃಷಿ ಕ್ಷೇತ್ರದ ಬಗ್ಗೆ ಮಾನ್ಯ ಹಣಕಾಸಿನ ಸಚಿವರು ಅವರು ಬಜೆಟ್‌ನ್ನು ಮಂಡಿಸುವಾಗ ಬಹಳ ಒಳ್ಳೆಯ ಮಾತುಗಳಿಂದ ಶುರುಮಾಡಿದರು. ಕೃಷಿಗೆ ನಮ್ಮ ಮೊದಲ ಆದ್ಯತೆ, ಕೃಷಿ ಕ್ಷೇತ್ರ ಶೇಕಡ 70 ರಷ್ಟು ರೈತರು ಗ್ರಾಮೀಣ ಭಾಗದಲ್ಲಿ ಕೃಷಿಯನ್ನೇ ಅವಲಂಬಿಸಿಕೊಂಡು ಜೀವನ ಮಾಡುತ್ತಿರುವುದರಿಂದಾಗಿ ಕೃಷಿ ಕ್ಷೇತ್ರಕ್ಕೆ ನಮ್ಮ ಆದ್ಯತೆ ಇದೆ ಎನ್ನುವಂತಹ

ಮಾತಿನಲ್ಲಿ ತಮ್ಮ ಭಾಷಣವನ್ನು ಪ್ರಾರಂಭ ಮಾಡಿದರು. ಅವರು ಹೇಳಿದರು.

"ಬೆಳಗಾಗ್ಯ ನಾನೆದ್ದು ಯಾರ್ಯಾರ ನೆನೆಯಲಿ,
ಎಳ್ಳು ಜೀರಿಗೆ ಬೆಳೆಯೋಣ, ಎಳ್ಳು ಜೀರಿಗೆ ಬೆಳೆಯೋಳೆ
ಭೂಮಿತಾಯಿ, ನಾನೊಂದು ಗಳಿಗೆ ನಿನ್ನ ನೆನೆದೇನೋ"

ಎನ್ನುವಂತಹ ಮಾತನ್ನು ಹೇಳಿ ಈ ಕೃಷಿ ಕ್ಷೇತ್ರಕ್ಕೆ ಹೆಗೆ ಪ್ರಾಮುಖ್ಯತೆಯನ್ನು ಕೊಟ್ಟಿದ್ದೇವೆಂದು ಅವರು ಹೇಳಿದರು. ಶೇಕಡಾ 19ರಷ್ಟು ಕೃಷಿ ಕ್ಷೇತ್ರದಿಂದ ನಮ್ಮ ರಾಜ್ಯಕ್ಕೆ ಆದಾಯ ಸಂದಾಯವಾಗುತ್ತಿರುವಂತಹ ವಿವರಗಳನ್ನು ಎಲ್ಲವನ್ನು ತಿಳಿಸಿದರು. ಈ ಪ್ರಾಮುಖ್ಯತೆಯನ್ನು ನಾವು ಮುಂದುವರಿಸಿದ್ದೇವೆ ಎನ್ನುವಂತಹ ಆರ್ಥಿಕ ವಿವರಗಳನ್ನು ನೋಡಲಿ ವಿಷಯ ಸಮಿತಿಗಳು ಕೊಟ್ಟಂತಹ ಮಾಹಿತಿಗಳನ್ನು ನೋಡಿದರೆ ಈ ಇಲಾಖೆ ರೈತರ ಪರವಾಗಿ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಸಂಪೂರ್ಣವಾಗಿ ವಿಫಲವಾಗಿರುವುದನ್ನು ನಾವು ಕಾಣುತ್ತಿದ್ದೇವೆ. ಕೃಷಿ ಮತ್ತು ತೋಟಕಾರಿಕೆ ಇಲಾಖೆ, ರೇಷ್ಮೆ ಇಲಾಖೆ ಇದು ಯಾವುದು ಬೇರೆ ಅಲ್ಲ. ಇದು ಎಲ್ಲಾ ಒಂದೇ ಇಲಾಖೆಯಾಗಿದೆ. ರೈತರು ಇದೆಲ್ಲವನ್ನು ಮಾಡುವವರಾಗಿದ್ದಾರೆ. ಆದರೆ ನಿಮ್ಮ ಆಡಳಿತಾತ್ಮಕವಾಗಿ ಮಾಡಿಕೊಂಡಿರುವುದು ಕೃಷಿ ಮತ್ತು ತೋಟಗಾರಿಕೆ ಇಲಾಖೆ, ರೇಷ್ಮೆ ಇಲಾಖೆ ಮತ್ತು ಇತ್ಯಾದಿಗಳನ್ನು ಮಾಡಿಕೊಂಡಿರುವುದರಿಂದ ಒಟ್ಟಾರೆಯಾಗಿ ನಾವು ಕೃಷಿ ಕ್ಷೇತ್ರವನ್ನು ನೋಡುವುದರಿಂದ ಕೃಷಿ ಕ್ಷೇತ್ರದಲ್ಲಿ ಇವತ್ತು ಸರ್ಕಾರದ ಯೋಜನೆಗಳು ಅನುಷ್ಠಾನಗೊಳ್ಳುವಂತಹ ರೀತಿಯನ್ನು ನೋಡಿದರೆ ನಾವು ಕೃಷಿ ಕ್ಷೇತ್ರಕ್ಕೆ ರಾಜ್ಯ ಸರ್ಕಾರವಾಗಲಿ ಅಥವಾ ಕೇಂದ್ರಸರ್ಕಾರವಾಗಲಿ ಪ್ರಾಮುಖ್ಯತೆಯನ್ನು ಕೊಡುತ್ತಿಲ್ಲ. ಎನ್ನುವುದು ಸ್ಪಷ್ಟವಾಗುತ್ತದೆ. ರೈತರು ಇವತ್ತಿಗೂ ಆ ಕಷ್ಟದ ಸ್ಥಿತಿಯನ್ನು ಅನುಭವಿಸುತ್ತಿರುವುದನ್ನು ಕಾಣುತ್ತಿದ್ದೇವೆ. ಹಾಗಾಗಿ ಆತ್ಮಹತ್ಯೆ ಪ್ರಕರಣಗಳು ಕರ್ನಾಟಕದಲ್ಲಿ ಅತಿ ಹೆಚ್ಚು ಆಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಕೃಷಿ ಕ್ಷೇತ್ರಕ್ಕೆ ನೇರವಾಗಿ 6 ರಿಂದ 7 ಪರ್ಸೆಂಟ್ ಹಣವನ್ನು ಬಜೆಟ್‌ನಲ್ಲಿ ಕೊಡುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ನೀರಾವರಿಯನ್ನು ನಾವು ಹೊರತುಪಡಿಸಿದರೆ ಕೃಷಿ ಕ್ಷೇತ್ರಕ್ಕೆ 6 ರಿಂದ 7 ಪರ್ಸೆಂಟ್ ಮಾತ್ರ ಸಿಗುತ್ತದೆ. ಕೃಷಿ ಕ್ಷೇತ್ರಕ್ಕೆ ಬಜೆಟ್‌ನಲ್ಲಿ ಕೊಡುತ್ತಿರುವಂತಹ ಹಣ ಇದು ಯಾವುದಕ್ಕೂ ಕೂಡ

ಸಾಲುವುದಿಲ್ಲವೆನ್ನುವಂತಹ ಮಾತನ್ನು ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ. ಇಲ್ಲಿ ನಮ್ಮ ಹಳ್ಳಿ ಕಡೆಗಳಲ್ಲಿ ಒಂದು ಗಾದೆ ಇದೆ.

"ಅಲ್ಲಿ 6 ಕಾಸಿನ ಮಜ್ಜಿಗೆ ಏಕೆ ಎಂದು"

ಅಂದರೆ ನಾವು ಇಷ್ಟು ದೊಡ್ಡ ಕೃಷಿ ಕ್ಷೇತ್ರವನ್ನು ಹೊಂದಿದ್ದೇವೆ. ನಾನು ಎಲ್ಲಾ ಅಂಕಿ–ಸಂಖ್ಯೆಗಳನ್ನು ಹಾಗೂ ಕೃಷಿ ಭೂಮಿ ಎಷ್ಟು ಇದೆ ಇತ್ಯಾದಿ ಎಂಬುದನ್ನು ಹೇಳುವುದಕ್ಕೆ ಹೋಗುವುದಿಲ್ಲ. ನಾವು ಕೊಡುತ್ತಿರು ವಂತಹ ಪ್ರಾಮುಖ್ಯತೆ ನಮ್ಮ ಬಜೆಟ್‌ನಲ್ಲಿ ಅದಕ್ಕೆ ತೆಗೆದಿಟ್ಟಿರುವಂತಹ ಹಣಕಾಸು ಇದು ಯಾವುದಕ್ಕೂ ಕೂಡ ಸಾಲುವುದಿಲ್ಲ. ಹಾಗಾಗಿ ಕೃಷಿ ಕ್ಷೇತ್ರಕ್ಕೆ ಹೊಸ ಬದಲಾವಣೆಯನ್ನು ಒಂದು ಸುಧಾರಣೆಯನ್ನು ತರುವುದಕ್ಕೆ ಆಗುವುದಿಲ್ಲ. ಬಜೆಟ್‌ನಲ್ಲಿ ಇದು ಹೆಚ್ಚಾಗಬೇಕು, ಇದು ಒಂದು ಭಾಗ, ಎರಡನೆಯದಾಗಿ ಈಗಿರುವಂತಹ ಬಜೆಟ್‌ನಲ್ಲಿ ಇದು ಹೇಗೆ ಅನುಷ್ಠಾನ ಗೊಂಡಿದೆ ಎಂಬುದನ್ನು ನೋಡುವುದಕ್ಕೆ ಹೊರಟರೆ ಕೃಷಿ ಇಲಾಖೆ ಹೇಗೆ ರೈತರಿಂದ ಇವತ್ತು ದೂರದಲ್ಲಿದೆ ಎಂಬುದನ್ನು ನಾವು ನೋಡಬಹುದು. ನಾವು ಎಲ್ಲಾ ಹಂತದಲ್ಲಿ ಕೃಷಿ ಇಲಾಖೆಗೆ ಪ್ರಾಮುಖ್ಯತೆ ಕೊಡುತ್ತಿರುವುದು ಮನದಟ್ಟಾಗುತ್ತಿರುವುದು ಪ್ರಮುಖವಾದಂತಹದ್ದು. ಕಾಂಗ್ರೆಸ್ ಕಳೆದ 50 ವರ್ಷಗಳಿಂದ ಈ ದೇಶದಲ್ಲಿ ಆಡಳಿತವನ್ನು ನಡೆಸಿದೆ. ಈಗ ಮತ್ತೆ ಅದರ ನೇತೃತ್ವದಲ್ಲಿ ಸರ್ಕಾರ ನಡೆಯುತ್ತಿದೆ. ಮೊನ್ನೆ ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಸಭೆ ನಡೆಯಿತು. ಮುಖ್ಯಮಂತ್ರಿಗಳು ಮತ್ತು ಹಣಕಾಸಿನ ಸಚಿವರು ಎಲ್ಲರೂ ಅಲ್ಲಿಗೆ ಹೋಗಿದ್ದರು. ಅಲ್ಲಿ ಪ್ರಧಾನಮಂತ್ರಿ ಮನಮೋಹನ್ ಸಿಂಗ್‌ರವರು ಹೇಳಿದರು, ಕೃಷಿ ವಲಯದ ಪ್ರಗತಿ ಕುಂಠಿತಗೊಂಡಿರುವುದರಿಂದ ಗ್ರಾಮೀಣ ಪ್ರದೇಶಗಳ ಬಡ ಜನರು ಸೌಲಭ್ಯಗಳಿಂದ ವಂಚಿತರಾಗಿರುವುದಕ್ಕೆ ಪ್ರಧಾನ ಮಂತ್ರಿಗಳು ಕಳವಳ ವ್ಯಕ್ತಪಡಿಸಿದರು. ಕಾಂಗ್ರೆಸ್ ಈ ದೇಶದಲ್ಲಿ 50 ವರ್ಷ ಆಡಳಿತವನ್ನು ನಡೆಸಿತು. ಅದರ 50 ವರ್ಷಗಳ ಆಡಳಿತ ಫಲವಾಗಿಯೇ ರೈತರು ಈ ಪರಿಸ್ಥಿತಿಯನ್ನು ಅನುಭವಿಸುತ್ತಿದ್ದಾರೆ. ಇವತ್ತಿನ ಮಾನ್ಯ ಪ್ರಧಾನ ಮಂತ್ರಿಗಳಿಗೆ ಇದು ಮನವರಿಕೆಯಾಗಿರುವುದು ಒಂದು ಸಂತೋಷದ ವಿಷಯವಾಗಿದೆ. ಇಷ್ಟು ವರ್ಷಗಳ ಕಾಲ ಅವರು ಆಡಳಿತವನ್ನು ಮಾಡಿ ನಾವು ರೈತರಿಗೆ ಒಳ್ಳೆಯದನ್ನು ಮಾಡಲಿಲ್ಲವೆಂದು ಅವರಿಗೆ ಅನಿಸಿದೆ. ಅದನ್ನು ಅವರು ಉಲ್ಲೇಖ ಮಾಡಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮುಂದು) ನಮ್ಮ ಪ್ರಧಾನ ಮಂತ್ರಿಗಳನ್ನು

ಅಭಿನಂದಿಸುತ್ತೇನೆ. 50 ವರ್ಷದ ಕಾಂಗ್ರೆಸ್ ಆಡಳಿತದಲ್ಲಿ ರೈತರಿಗೆ, ಕೃಷಿಕರಿಗೆ ಏನು ಮಾಡಲಿಲ್ಲ. ಅದರಿಂದ ಏನು ಉಪಯೋಗ ವಾಗಲಿಲ್ಲವೆಂದು ಮೊನ್ನೆ ದೆಹಲಿಯಲ್ಲಿ ನಡೆದ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಸಭೆಯಲ್ಲಿ ಮಾನ್ಯ ಪ್ರಧಾನಮಂತ್ರಿಗಳು ಅದನ್ನು ಒಪ್ಪಿಕೊಂಡಿದ್ದಾರೆ. ಆದರೆ ಇವತ್ತು ಕೃಷಿ ಕ್ಷೇತ್ರದ ಬಗ್ಗೆ, ರೈತರ ವಿಷಯದ ಬಗ್ಗೆ. ಇವತ್ತು ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಸಭೆಯಲ್ಲಿ ಪ್ರಾಮುಖ್ಯತೆ ಸಿಗುವುದನ್ನು ಕಾಣುತ್ತಿದ್ದೇವೆ. ಅದು ಆಗಬೇಕಾಗಿದೆ. ಹಾಗಾಗಿ ಅಲ್ಲಿಯೂ ಸಹ ನಮ್ಮ ರಾಜ್ಯದಿಂದ ಬಲವಾದ ಪ್ರತಿಪಾದನೆ ಆಗಬೇಕಾಗಿತ್ತು, ನಮ್ಮ ರಾಜ್ಯದ ರೈತರ ಪರವಾಗಿ ನಾವು ಎದುರಿಸುತ್ತಿರುವ ಕಷ್ಟವನ್ನು ದೂರ ಮಾಡಬೇಕಾಗಿದೆ. ಏಕೆಂದರೆ, 4 ವರ್ಷದಿಂದ ಬರಗಾಲಕ್ಕೆ ತುತ್ತಾಗಿ ನಮ್ಮ ರಾಜ್ಯದ ರೈತರು ಯಾವ ರೀತಿ ಸಂಕಷ್ಟವನ್ನು ಎದುರಿಸಬೇಕಾಗಿದೆ ಯೆಂಬುದನ್ನು ಸಮರ್ಪಕವಾಗಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಪ್ರತಿಪಾದನೆ ಮಾಡಬೇಕಾಗಿತ್ತು. ಆ ಬಗ್ಗೆ ಗುರುವಾರ, ಶುಕ್ರವಾರ ಹಾಗೂ ಇಂದು ಕೂಡ ಚರ್ಚೆ ಮಾಡಿದಂತೆ ಅದು ಶೇಕಡ 6 ರಷ್ಟು ಬಡ್ಡಿಗೆ ಎಲ್ಲಾ ರಾಷ್ಟ್ರೀಯ ಬ್ಯಾಂಕುಗಳಲ್ಲಿ ಸಾಲ ಸೌಲಭ್ಯ ಸಿಗುವುದರಿಂದ ಹಿಡಿದು ಬೇರೆ ಬೇರೆ ಅನೇಕ ಸಂಗತಿಗಳ ಬಗ್ಗೆ ನಮ್ಮ ಬಲವಾದಂತಹ ವಾದ ನಮ್ಮ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಸಭೆಯಲ್ಲಿ ಆಗಬೇಕಾಗಿತ್ತು. ಆದರೆ ಆಗಲಿಲ್ಲ, ಅಷ್ಟೇ ಅಲ್ಲ, ನಮ್ಮ ಕೃಷಿ ತಜ್ಞರು ಅನೇಕ ರೀತಿಯ ಸಲಹೆಗಳನ್ನು ಸರ್ಕಾರಕ್ಕೆ ಕೊಡುತ್ತಿದ್ದಾರೆ. ಅನೇಕ ರೀತಿಯ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಕೃಷಿ ತಜ್ಞರ ಸಂಘದ ಅಧ್ಯಕ್ಷರು: ಡಾ: ರಾಜಣ್ಣ, ಡಾ: ಜಿ.ಕೆ.ವೀರೇಶ್, ಡಾ: ಬಿಸಲಯ್ಯ, ಡಾ: ಜಗನ್ನಾಥ್, ಡಾ: ವೀರಭದ್ರಯ್ಯ ಇತ್ಯಾದಿ ಇನ್ನು ಅನೇಕರು ಅವರೆಲ್ಲಾ ಸೇರಿ ಕೃಷಿ ಕ್ಷೇತ್ರಕ್ಕೆ ಯಾವರೀತಿ ಪ್ರಾಮುಖ್ಯತೆಯನ್ನು ಕೊಡಬೇಕೆಂಬ ಬಗ್ಗೆ ಸರ್ಕಾರಕ್ಕೆ ವರದಿಯನ್ನು ಕೊಟ್ಟಿದ್ದಾರೆ. ಆದರೆ ಇವೆಲ್ಲವೂ ಇವತ್ತು ಧೂಳು ತಿನ್ನುತ್ತಿದೆಯೇ ಹೊರತು ಸರ್ಕಾರದ ರೈತರ ಪರವಾದ ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದಾಗಿ ಇದು ಅನುಷ್ಠಾನಕ್ಕೆ ಬಾರದಿರುವುದನ್ನು ನಾವು ಕಾಣುತ್ತಿದ್ದೇವೆ. ಇವತ್ತು ರೈತರು ಇಷ್ಟೆಲ್ಲಾ ಕಷ್ಟವನ್ನು ಅನುಭವಿಸುತ್ತಿದ್ದಾರೆ ಎಂಬ ಬಗ್ಗೆ ನಾವು ಈಗ ಉಲ್ಲೇಖ ಮಾಡಬಹುದು, ನಮ್ಮ ಹೊಲಗಳಲ್ಲಿ ನೀರು ಇಲ್ಲ, ಈ ಬೃಹತ್ ನೀರಾವರಿ ಯೋಜನೆಗಳ ಬಗ್ಗೆ ಉಲ್ಲೇಖ ಮಾಡುವುದಿಲ್ಲ. ಸಣ್ಣ ನೀರಾವರಿ ಯೋಜನೆಗಳಿಂದ ಹಿಡಿದು ಬಂದಾರ, ಕಿಂಡಿ ಅಣೆಕಟ್ಟು ಇರಬಹುದು, ಇದ್ಯಾವುದಕ್ಕೂ ಪ್ರಾಮುಖ್ಯತೆ ಸಿಗದಿರುವುದರಿಂದ ರೈತರಿಗೆ, ಎಲ್ಲಾ

ಕೃಷಿಗೆ ಮೂಲಭೂತವಾಗಿ ಬೇಕಾದಂತಹ ನೀರಿನ ಸೌಕರ್ಯವನ್ನು ಮಾಡಿಕೊಳ್ಳಲು ಸಾಧ್ಯವಾಗದಿರುವುದರಿಂದ ರೈತರಿಗೆ ಅನೇಕ ಸಮಸ್ಯೆಗಳು ಇವೆ. ಸರ್ಕಾರ ಬೆಂಬಲ ಬೆಲೆ ಘೋಷಣೆ ಮಾಡುತ್ತದೆ. ಅದಕ್ಕೆ ಎಳ್ಳಷ್ಟು ಅನುಕೂಲವಾಗ ದಿರುವಂತಹ ರೀತಿಯಲ್ಲಿ ನೋಡಿಕೊಳ್ಳುತ್ತಿದ್ದಾರೆ. ಈರುಳ್ಳಿಗೆ ಬೆಂಬಲ ಬೆಲೆ ಕೊಟ್ಟು ಕೊಂಡುಕೊಳ್ಳುವವರಿಲ್ಲ ಎಂದು ಬೊಬ್ಬೆ ಹೊಡೆದರೆ ಶಿಕಾರಿಪುರದಲ್ಲಿ ನಮ್ಮ ನಾಯಕರಾದ ಶ್ರೀ ಯಡಿಯೂರಪ್ಪನವರು ಹೋರಾಟ ಮಾಡಿದ ನಂತರವೂ ನೀವು ಅಲ್ಲಿ ಹೋಗಿ ತೆಗೆದುಕೊಳ್ಳುವುದಕ್ಕೆ ಎಷ್ಟು ವಿಳಂಬ ಮಾಡಿದಿರಿ ಎಂಬುದು ನಿಮಗೆ ಗೊತ್ತಿದೆ, ಮೆಕ್ಕೆಜೋಳ ಇರಲಿ, ಅಡಕೆ ಬಗ್ಗೆ ಹೇಳುವುದಾದರೆ ನಾವು ಅಡಕೆ ಪ್ರದೇಶದಿಂದ ಬಂದವರು, ನೀವು 10 ಕೋಟಿ ಹಣ ಕೊಡುತ್ತೇವೆಂದು ಹೇಳಿದರೂ ಸಹ ಇನ್ನು 6 ಕೋಟಿ ರೂಪಾಯಿಗಳು ಕೊಟ್ಟಿಲ್ಲ, ಕೇವಲ 4 ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಭತ್ತ ಖರೀದಿ ಆರಂಭಿಸಿಲ್ಲ. ಇವತ್ತು ಈ ರೀತಿ ಹೊಲಗಳಿಗೆ ನೀರು ಇಲ್ಲ, ದೊಡ್ಡ ನೀರಾವರಿ ಯೋಜನೆಗಳು ಆಗಿಲ್ಲ. ಶೇಕಡಾ 70ರಷ್ಟು ನಮ್ಮಲ್ಲಿ ಒಣ ಭೂಮಿ ಇದೆ, ನೀರಾವರಿಗೆ ಶೇಕಡ 30 ರಷ್ಟು ಭೂಮಿ ಮತ್ರ ಯೋಗ್ಯವಾಗಿದೆ, ಆ ಶೇ.70 ರಷ್ಟು ಒಣಭೂಮಿಯನ್ನು ಕೃಷಿಗೆ ಅಭಿವೃದ್ಧಿಪಡಿಸಲಿಕ್ಕೆ ಯಾವ ಪ್ರಯತ್ನವು ಇಲ್ಲದೇ ಇರುವುದು ಕಾಣುತ್ತಿದೆ. ಬೆಂಬಲ ಬೆಲೆ ಇವತ್ತು ಪೂರ್ಣ ಉಪಯೋಗ ಆಗದೇ ಇರುವ ರೀತಿಯಲ್ಲಿ ಅವರ ಇಂಟರ್‌ಪ್ರಿಟೇಷನ್, ಅಲ್ಲಿ ಇಂಪ್ಲಿಮೆಂಟೇಷನ್ ಆಗುತ್ತಿರುವುದನ್ನು ಕಾಣುತ್ತಿದ್ದೇವೆ. ಇದಲ್ಲದೆ ಬೆಳೆ ವಿಮೆಯಂತೂ ಅತ್ಯಂತ ಗೊಂದಲದ ಗೂಡಾಗಿದೆ. ಇವತ್ತು ಬೆಳೆ ವಿಮೆ ಕಳೆದ ವರ್ಷದಿಂದ ರೈತರಿಗೆ ಸಿಗದೆ ಆ ಬಗ್ಗೆ ಪತ್ರಿಕೆಗಳಲ್ಲಿ ದೊಡ್ಡ ದೊಡ್ಡ ಆರ್ಟಿಕಲ್ಸ್ ಬಂದಿವೆ. ಬೆಳೆ ವಿಮೆಯನ್ನು ಸಹ ಸಮರ್ಪಕವಾಗಿ ಸರಿಯಾದ ಸಂದರ್ಭದಲ್ಲಿ ಕೊಡದೆ ಇವತ್ತು ರೈತರ ಗಾಯಕ್ಕೆ ಮತ್ತಷ್ಟು ಬರೇ ಹಾಕುತ್ತಿದ್ದಾರೆಂದು ಕಾಣುತ್ತಿದೆ. ವಿದ್ಯುತ್ ಪಂಪ್‌ಸೆಟ್ಟುಗಳಲ್ಲಿ ಕರೆಂಟ್ ಇಲ್ಲ. ಇದರಿಂದ ತುಂಬಾ ತೊಂದರೆಗಳಾಗುತ್ತಿವೆ. ಎಷ್ಟೋ ಟ್ರಾನ್ಸ್‌ಫಾರ್ಮರ್ಸ್ ಕೆಟ್ಟು ಹೋಗಿದ್ದು ಅದನ್ನು ತೆಗೆದುಕೊಂಡು ಹೋಗಿದ್ದಾರೆ, ಇನ್ನೂ ಅದಕ್ಕೆ ಬದಲಿ ವ್ಯವಸ್ಥೆಯಾಗಿಲ್ಲ. ಈ ರೀತಿಯ ವ್ಯವಸ್ಥೆಯಿಂದ ಬಹಳಷ್ಟು ತೊಂದರೆಯನ್ನು ರೈತರು ಅನುಭವಿಸುತ್ತಿದ್ದಾರೆ, ಇದಲ್ಲದೆ ಇವತ್ತು ಬೀಜಗಳಿಗೆ ಸರಿಯಾದ ಬೆಂಬಲ ಬೆಲೆ ಇಲ್ಲ. ಚಮತ್ಕಾರಿ ಹತ್ತಿ ಬೀಜದ ಬದಲಿಗೆ ಬೇರೆ ಹತ್ತಿ ಬೀಜವನ್ನು ಕೊಟ್ಟು ರೈತರಿಗೆ ಮೋಸ ಮಾಡಿರುವ ಪರಿಣಾಮದಿಂದ ರೈತರು ಕಂಗಾಲಾಗಿದ್ದಾರೆ.

ಬೀಜಗಳು ಸರಿಯಿಲ್ಲ, ಇವತ್ತು ಕೃಷಿ ಇಲಾಖೆಯಲ್ಲಿ ಅನೇಕ ವರ್ಗಗಳಿವೆ, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಇವೆಲ್ಲಾ ಏನು ಮಾಡುತ್ತಿದೆ ಎಂಬ ಪ್ರಶ್ನೆ ಇದೆ. ಕರ್ನಾಟಕ ರಾಜ್ಯ ಬೀಜ ನಿಗಮದಿಂದ ರೈತರಿಗೆ ಸೂಕ್ತವಾದ ಬೀಜಗಳು ಸಿಗುತ್ತಿಲ್ಲ, ಬೀಜಕ್ಕೆ ಹಾಹಾಕಾರ ಉಂಟಾಗಿದೆ. ಗೊಬ್ಬರಗಳು ಸಿಗುತ್ತಿಲ್ಲ, ಹೀಗೆ ರೈತರ ಸಮಸ್ಯೆಗಳ ಬಗ್ಗೆ ಯೋಚನೆ ಮಾಡುತ್ತಾ ಹೋದರೆ ನಾವು ಎಷ್ಟು ದೊಡ್ಡ ಸಂಕಷ್ಟಗಳನ್ನು ಎದುರಿಸುತ್ತಿದ್ದೇವೆ ಎಂದು ತಿಳಿಯುತ್ತದೆ. ಕಾಫಿ ಬೆಳೆ. ಅಡಕೆ ಬೆಳೆ ಆಗಿರಬಹುದು, ಯಾವ ಕ್ಷೇತ್ರದಲ್ಲೇ ಆಗಲಿ ರೈತರಿಗೆ ಅವರಿಗೆ ಸಮಸ್ಯೆಯಿದೆ. ಆದರೆ ಇಲಾಖೆ ಮಾತ್ರ ಆರಾಮವಾಗಿ ಇದೆ, ಕೃಷಿ ಇಲಾಖೆಯಲ್ಲಿ ಕೃಷಿಕರಿಗೆ ಮಹತ್ವವಿರಬೇಕು, ಕೃಷಿ ಮಂತ್ರಿಗಳು ಉತ್ತರವನ್ನು ಚೆನ್ನಾಗಿ ಕೊಡುತ್ತಾರೆ, ನಾನು ಕಳೆದ ಕೆಲವು ವರ್ಷಗಳ ಹಿಂದೆ ಅವರ ಸಾಮರ್ಥ್ಯಕ್ಕೆ ಪ್ರಶಂಸೆ ವ್ಯಕ್ತಪಡಿಸಿದ್ದೇನೆ. ಆದರೆ ಈಗ ಅವರು ಬೇರೆ ಕೆಲಸದಲ್ಲಿ ತೊಡಗಿಕೊಂಡಿರುವುದರ ಪರಿಣಾಮವಾಗಿ ಅವರು ಇಲ್ಲಿ ಸಮರ್ಥವಾಗಿ ಕೆಲಸ ನಿರ್ವಹಿಸುತ್ತಿಲ್ಲ. ಅವರು ಈ ಕಡೆ ಇದ್ದಾಗ ರೈತರ ಪರವಾಗಿ ಇದ್ದರು, ಆ ಕಡೆ ಹೋದಾಗ ಅವರು ರೈತರನ್ನು ಮರೆತಿದ್ದಾರೆ. ಅವರು ಮಾನ್ಯ ಹಿರಿಯಸದಸ್ಯರಾಗಿದ್ದಾಗ ಅವರ ಜೊತೆ ನಾನು ಅನೇಕ ಬಾರಿ ಮಾತನಾಡಿದ್ದೇನೆ. ಅವರ ಜೊತೆಯಲ್ಲಿ ಅವರ ಅನೇಕ ಅನುಭವ ಹಾಗೂ ವಿದೇಶಿ ಪ್ರವಾಸದ ಅನುಭವಗಳನ್ನು ಸಹ ಹಂಚಿಕೊಂಡಿದ್ದೇನೆ. ಆದರೆ ಮಂತ್ರಿಗಳಾದ ಮೇಲೆ ಅವರು ಶಿಸ್ತು ಮರೆತು ರೈತರ ಪರವಾಗಿ ಬೆಳಿಗ್ಗೆ ಮಾತನಾಡಿದ್ದನ್ನು ನಾನು ನೋಡಿದ್ದೇನೆ ಕಾರಣಾಂತರಗಳಿಂದ ಅವರ ಅದ್ಯತೆ ಬದಲಾಗಿದೆ, ಹಾಗಾಗಿ ವ್ಯಾಪಾರಸ್ಥರ ಸಮಸ್ಯೆಯನ್ನು, ರೈತರ ಸಮಸ್ಯೆಯನ್ನು ಹೇಳುವವರು, ಕೇಳುವವರು ಯಾರು ಇಲ್ಲದಂತಾಗಿದೆ. ರಾಜ್ಯದಲ್ಲಿ ಸುಮಾರು 745 ರೈತ ಸಂಪರ್ಕ ಕೇಂದ್ರಗಳು ಇವೆ, ಹೆಚ್ಚು ಕಡಿಮೆ ರೈತ ಸಂಪರ್ಕ ಕೇಂದ್ರಗಳು ಸರಿಯಾಗಿಲ್ಲದೆ ಇರುವುದರಿಂದ ಇವತ್ತು ರೈತರ ಸಂಪರ್ಕ ಕೇಂದ್ರ ಎಂದರೆ ಸುಲಿಗೆ ಕೇಂದ್ರವಾಗಿದೆ.

ಶ್ರೀ ಡಿ.ಆರ್.ಪಾಟೀಲ್: ಈ ಆಯಿಲ್ ಸೀಡ್ಸ್ ಮೇಲೆ ಟ್ಯಾಕ್ಸ್ ಹಾಕಲಿಕ್ಕೆ ಬಜೆಟ್‌ನಲ್ಲಿ ಪ್ರಪೋಸ್ ಮಾಡಿದ್ದಾರೆ. ಮೊದಲು ಅದು ಬರುವುದು ನಮ್ಮ ಭಾಗದಲ್ಲಿ, ಇದನ್ನು ಕೂಡಲೇ ನಿಲ್ಲಿಸಬೇಕು, ಈ ಬಗ್ಗೆ ತಾವು ಹಣಕಾಸಿನ ಸಚಿವರ ಜೊತೆಗೆ ಮಾತನಾಡಿ ಒಂದು ಅಮೆಂಡ್‌ಮೆಂಟನ್ನು ತಂದು ಈ ಟ್ಯಾಕ್ಸ್ ಅನ್ನು ತೆಗೆಯಲಿಕ್ಕೆ ಕ್ರಮ ಕೈಗೊಳ್ಳಬೇಕೆಂದು ವಿನಂತಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಡಿ.ಆರ್.ಪಾಟೀಲರವರು ಹೇಳಿದ್ದಕ್ಕೆ ನಾನು ಸಹಮತ ವ್ಯಕ್ತಪಡಿಸುತ್ತೇನೆ. ಈ ರಸಗೊಬ್ಬರ ಇರಬಹುದು, ಬೀಜಗಳು ಇರಬಹುದು, ಇವೆಲ್ಲಾ ಮಲ್ಟಿ ನ್ಯಾಷನಲ್ ಕಂಪೆನಿಗಳ ಹಿಡಿತಕ್ಕೆ ಹೋಗುತ್ತಿವೆ. ಅದರ ಪರಿಣಾಮವಾಗಿ ಇವೆಲ್ಲಾ ಸಮಸ್ಯೆಗಳು ಆಗುತ್ತಿದೆ, ಆದರೆ ಇವತ್ತು ದೊಡ್ಡ ದೊಡ್ಡ ಮಲ್ಟಿ ನ್ಯಾಷನಲ್ ಕಂಪೆನಿಗಳು ಬೀಜವನ್ನು ತೆಗೆದುಕೊಳ್ಳುತ್ತಿದೆ ಮಾರಾಟ ಮಾಡುತ್ತಿದೆ. ಅಲ್ಲಿ ಹೇಗೆ ನಮ್ಮ ಬೀಜಗಳನ್ನು ರಿಜಿಸ್ಟರ್ ಮಾಡಬೇಕಾಗಿದೆ ಎಂಬುದರ ಬಗ್ಗೆ ನಾವು ಗಂಭೀರವಾಗಿ ಯೋಜನೆ ಮಾಡುವಂತಹ ಅಗತ್ಯವಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: (ಮುಂದು) ರಾಜ್ಯದಲ್ಲಿರುವ ಕಂಪನಿ ಗಳು ಬೀಜವನ್ನು ಉತ್ಪಾದನೆ ಮಾಡಿ ರೈತರಿಗೆ ಕೊಡುತ್ತಿವೆ. ಆ ಬೀಜಗಳು ಸರಿಯಾಗಿರುವುದಿಲ್ಲ. ಬೀಜ ಉತ್ಪಾದನೆಯಲ್ಲಿ ನಿಮ್ಮ ಆದ್ಯತೆ ಏನು? ಅದಕ್ಕೆ ಯೋಜನೆಗಳನ್ನು ಏನಾದರೂ ಹಾಕಿಕೊಂಡಿದ್ದೀರಾ? ಹೊಸ ಹೊಸ ಬೀಜಗಳನ್ನು ಹೊಸ ಹೊಸ ತಳಿಗಳನ್ನು ಸಂಶೋಧನೆ ಮಾಡಿ ಕೊಟ್ಟಿದ್ದೀರಾ? ನಮ್ಮಲ್ಲಿ ಕೆಲವು ವಿಜ್ಞಾನಿಗಳು, ಕೃಷಿ ವಿಜ್ಞಾನಿಗಳು ಮಾಡಿರುವಂತಹ ಹೊಸ ತಳಿಗಳು ಇರಬಹುದು, ಬೀಜಗಳು ಇರಬಹುದು, ಆ ವಿಜ್ಞಾನಿಗಳಿಗೆ ನೀವು ರಾಜಕೀಯ ಇಚ್ಛಾಶಕ್ತಿಯನ್ನು ತೋರಿಸಿ ಕೆಲಸ ಮಾಡುವಂತೆ ಮಾಡಿದ್ದೀರಾ? ಆದರೆ ಬೀಜಗಳನ್ನು ಮಾರುಕಟ್ಟೆಗೆ ತರುವುದಕ್ಕೆ ತಮ್ಮ ಕೃಷಿ ವಿಶ್ವವಿದ್ಯಾನಿಲಯಗಳು ಇರಬಹುದು, ಬೀಜ ನಿಗಮದವರು ಇರಬಹುದು, ನಮ್ಮ ಕರ್ನಾಟಕ ರಾಜ್ಯ ಬೀಜ ಕೇಂದ್ರಗಳು ಇರಬಹುದು, ಬೇರೆ ಬೇರೆ ಕೃಷಿ ಉತ್ಪಾದನಾ ರಫ್ತು ನಿಗಮಗಳು ಇರಬಹುದು, ಯಾರಾದರೂ ಇದರ ಬಗ್ಗೆ ಪ್ರಯತ್ನ ಮಾಡಿದ್ದೀರಾ? ಕೃಷಿ ವಿಜ್ಞಾನಿಗಳು ಅಧ್ಯಯನ ಮಾಡಿ ಹೊಸ ಹೊಸ ತಳಿಗಳನ್ನು ಸಂಶೋಧನೆ ಮಾಡಿ.....

ಶ್ರೀ ಕೆ. ಆರ್. ರಮೇಶ್ ಕುಮಾರ್: ಮಾನ್ಯ ಅಧ್ಯಕ್ಷರೇ, ದಯಮಾಡಿ ಮಾನ್ಯ ಸದಸ್ಯರು ಇನ್ನೂ ಸ್ಲೋ ಆಗಿ, ಡಿಟೇಲ್ಸ್‌ಗೆ ಬನ್ನಿ. ನಾನು ಡಿಟೇಲ್ಸ್‌ಗೆ ಈಗ ಹೋಗುವುದಿಲ್ಲವೆಂದರೆ ಹೋಗುವುದು ಯಾವಾಗ? ಡಿಟೇಲ್ಸ್‌ಗೆ, ಎಲ್ಲಾ ಡಿಟೇಲ್ಸ್‌ಗೆ ನೀವು ಬರಬೇಕು. ಅಗ್ರಿಕಲ್ಚರ್ ಯುನಿವರ್ಸಿಟಿ ರೆಫರ್ ಮಾಡಿದಿರಿ ಜಂಪ್ ಆಗಿ ಬಿಟ್ಟಿರಿ. ಅಗ್ರಿಕಲ್ಚರ್ ಯುನಿವರ್ಸಿಟಿಯಲ್ಲಿ ಯಾವ ಯಾವ ಫ್ಯಾಕ್ಟರೀಸ್ ಇವೆ, ಅವುಗಳ ಮೇಲೆ ಎಷ್ಟು ಬಂಡವಾಳ ಹಾಕಿದ್ದೇನೆ. ಅವುಗಳಿಂದ ನಮ್ಮ ರೈತನಿಗೆ ದಿನನಿತ್ಯದ ಬದುಕಿಗೆ ಏನಾದರೂ ಪ್ರಯೋಜನ ಇದೆಯೇ?

ಇಲ್ಲಾ ರೈತ ಇವರನ್ನು ನಂಬಬಾರದೇ? ಅಥವಾ ನಾವು ಈ ಯುನಿವರ್ಸಿಟಿಗೆ ದುಡ್ಡು ಕೊಡುವುದನ್ನು ನಿಲ್ಲಿಸಿ ಇವುಗಳನ್ನೆಲ್ಲಾ ಬರಿದು ಮಾಡಬೇಕಾ? ಏನು ಪ್ರಯೋಜನ ಈ ಯುನಿವರ್ಸಿಟಿಯಿಂದ, ಕಡೆ ಪಕ್ಷ ಒಂದು ಬೇಲಿ ಹಾಕುವುದನ್ನು ಇವತ್ತು ಇಂಪ್ಲಿಮೆಂಟ್ ಮಾಡಿ ಸಂಶೋಧನೆ ಮಾಡಿ ನಮಗೆ ಏನಾದರೂ ರಿಜಲ್ಟ್ ಕೊಟ್ಟಿದ್ದೀರಾ? ನೀವು ಜಂಪ್ ಮಾಡುತ್ತಾ ಹೋಗುತ್ತಿದ್ದೀರಿ I appreciate your earnextness. ಸ್ವಲ್ಪ ಸ್ಲೋ ಡೌನ್. ನಾವು ಇನ್ನೂ ಬಹಳ ಆಸಕ್ತಿಯಿಂದ ಕೇಳುತ್ತಿದ್ದೇವೆ. ಅಗ್ರಿಕಲ್ಚರ್ ಮೇಲೆ ಬೇಕಾದರೆ ನಾವು ಅಧ್ಯಕ್ಷರನ್ನು ಕೇಳಿಕೊಳ್ಳೋಣ ಇನ್ನೂ ಒಂದು ದಿವಸ ಎಕ್ಸಟೆಂಡ್ ಮಾಡಿಸೋಣ. ನಮ್ಮೆಲ್ಲರ ಬದುಕು ಇದರಲ್ಲಿ ಇನ್‌ವಾಲ್ವ್ ಆಗಿದೆ. Let us go into detail. ಇದು ಏನು ಸರ್ಕಾರದ ವಿರುದ್ಧ ಶ್ರೀನಿವಾಸಗೌಡರ ವಿರುದ್ಧವಲ್ಲ, ಈ ವ್ಯವಸ್ಥೆಯಲ್ಲಿ ಇದೀಗ ನಾವು ಮಾತನಾಡದೇ ಹೋದರೆ ಇನ್ನು ಮಾತನಾಡುವವರು ಯಾರು ಇದರ ಬಗ್ಗೆ go into the details.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ನಮ್ಮ ಕೃಷಿ ಸಚಿವರು ಟೀಕೆ ಮಡುತ್ತಾರೆಂದು ತಿಳಿದುಕೊಳ್ಳಬೇಡಿ. ನಿಮ್ಮ ಬಗ್ಗೆ ಕಳಕಳಿ ಇದೆ. ಕೆಲಸ ಮಾಡಬಹುದು ಅರಿತು ಅಂದುಕೊಂಡಿದ್ದೇವೆ. ಸಮರ್ಥರಿದ್ದೀರಿ. ಸಮಸ್ಯೆ ಏನೋ ನನಗೆ ಗೊತ್ತಿಲ್ಲ. ನಾಳೆ ಬರಬೇಕಾದರೆ ಅಂಕಿ-ಅಂಶಗಳನ್ನು ವೆರಿಫೈ ಮಾಡಿ ಹೇಳಿ ಪರವಾಗಿಲ್ಲ. ಅಗ್ರಿಕಲ್ಚರಲ್ ಅಂಡ್ ಅಲೈಡ್ ಆಕ್ಟಿವಿಟೀಸ್ (Agriculture and Allied activities) outly approved by planning Commission ನಿಮ್ಮ ಔಟ್‌ಲೇ ಅಪ್ರೂವ್ಡ್ ಬೈ ಪ್ಲಾನಿಂಗ್ ಕಮೀಷನ್ 281 ಕೋಟಿ 52 ಲಕ್ಷ. Revised estimates approved by planning commission ರಿವೈಜ್ಡ್ ಅಪ್ರೂವ್ಡ್ ಬೈ ಪ್ಲಾನಿಂಗ್ 241 ಕೋಟಿ 11 ಲಕ್ಷ. ಮಾನ್ಯ ರಮೇಶ್ ಕುಮಾರ್‌ರವರೇ ಆಶ್ಚರ್ಯ ಅಂದರೆ Expenditure up to March ಎಕ್ಸ್‌ಪೆಂಡೇಚರ್ ಅಪ್ ಟು ಮಾರ್ಚ್ 2005, 87 ಕೋಟಿ 23 ಲಕ್ಷ. ಅಂದರೆ 241 ಕೋಟಿ 11 ಲಕ್ಷದಲ್ಲಿ ನೀವು ಖರ್ಚು ಮಾಡಿರುವುದು 87 ಕೋಟಿ 23 ಲಕ್ಷ. ಆದರೆ ಇನ್ನು 153 ಕೋಟಿ 88 ಲಕ್ಷವನ್ನು ನೀವು ಖರ್ಚು ಮಾಡಲಿಲ್ಲ. Soil and Water conservation ಸಾಯಿಲ್ ಅಂಡ್ ವಾಟರ್ ಕನ್‌ಸರ್‌ವೇಶನ್ ಇಷ್ಟು

ಮುಖ್ಯವಾದ ಇಲಾಖೆಯಲ್ಲಿ. ಒನ್ ಥರ್ಡ್ ಹಾಗೆಯೇ ಉಳಿಯಿತು ಎನ್ನುವುದಾದರೆ ನಿಮ್ಮ ಇಲಾಖೆ ಇದೆಯೇ? ನಿಮ್ಮ ಕಷ್ಟ ಏನು? ಈ ಅಂಕಿ-ಅಂಶ ಸರಿ ಇಲ್ಲದಿದ್ದರೆ ನಾಳೆ ಬಂದು ಹೇಳಿ, ನಿಮಗೆ ಕೊಟ್ಟಂತಹ 241 ಕೋಟಿ 11 ಲಕ್ಷದಲ್ಲಿ ಮಾರ್ಚ್ ಕೊನೆಯವರೆಗೆ ನೀವು ಖರ್ಚು ಮಾಡಿರುವುದು 87 ಕೋಟಿ 23 ಲಕ್ಷ. ಇನ್ಯಾವುದೋ ಸೇರಿಕೊಂಡು ಇನ್ನು ಒಂದು 10 ಕೋಟಿ ಮಾಡಿದ್ದರೆ ಇನ್ನು 153 ಕೋಟಿ ನೀವು ಖರ್ಚು ಮಾಡಿಲ್ಲ. ಹಾಗಾದರೆ ಇಲಾಖೆ ಏನು? ರೈತರು ನೆಮ್ಮದಿಯಿಂದ ಇದ್ದಾರಾ? ನೀವು ಇನ್ನೂ ಹೆಚ್ಚು ತರಬೇಕಾಗಿತ್ತು. ಇನ್ನು ಮುಂದಿನ ವರ್ಷಕ್ಕೆ ಹೆಚ್ಚು ಕೇಳಬೇಕಾಗಿತ್ತು. ಕೊಟ್ಟಿದ್ದನ್ನೇ ನೀವು ಈ ರೀತಿ ಖರ್ಚು ಮಾಡಿಲ್ಲ ಎನ್ನುವುದಾದರೆ ಅದರ ಪರಿಣಾಮ ಏನಾಗಬಹುದು ಕೃಷಿಕನದ್ದು ಎಂದು ನೀವು ಯೋಚನೆ ಮಾಡಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮಾನ್ಯ ಅಧ್ಯಕ್ಷರೇ, ಮುಂದಿನ ವರ್ಷದ್ದು ಅಲ್ಲ ಈಗ ಏಕೆ ಕೊಡಬೇಕು ಎನ್ನುವುದು ನನ್ನ ಪ್ರಶ್ನೆ. ಈ ಬೇಡಿಕೆಯನ್ನು ಅವರು ಮಂಡಿಸಿದ್ದಾರಲ್ಲ. ಈ ಹಣವನ್ನು ಏಕೆ ಅವರಿಗೆ ಕೊಡಬೇಕು ಅಂತಾ ಏಕೆಂದರೆ ಅವರು ಒಂದು ಉತ್ತರವನ್ನು ಕೊಟ್ಟಿದ್ದಾರೆ ಈ ಇಲಾಖೆಯವರು. ಅದರಲ್ಲಿ ಮೇಜರ್ ಇರಿಗೇಷನ್‌ನಲ್ಲಿ ಪ್ಲಾನ್‌ದ್ದು ಎಷ್ಟು? ಕ್ರಿಯೇಟೆಡ್ ಅಪ್ ಟು 2005 ಎಷ್ಟು ಎಲ್ಲಾ ಕೊಟ್ಟಿದ್ದಾರೆ. ಮೈನರ್ ಇರಿಗೇಶನ್ ಬಗ್ಗೆ Annual production of the following major crops in Karnataka, paddy / ಪ್ಯಾಡಿ ಗೊತ್ತಿಲ್ಲ, ಇವರಿಗೆ ಶುಗರ್ ಕೇನ್ ಗೊತ್ತಿಲ್ಲ ಇವರಿಗೆ. ಉತ್ತರ ಕೊಟ್ಟಿರುವುದು. Strength of officers and officials including 'B' group in agriculture Department, including water shed department and detail of salary-Nil number of agriculture universities in Karnataka budget allotted for them. Salaries of officers and officials including 'B' group-Nil. ಎಲ್ಲಿಗೆ ತೆಗೆದುಕೊಂಡು ಹಾಗಾದರೆ ಏತಕ್ಕೋಸ್ಕರ ನಾವು ಈ ಬೇಡಿಕೆಯನ್ನು ಪಾಸ್ ಮಾಡುತ್ತಿದ್ದೇವೆ. ಏನೂ ಉತ್ತರವನ್ನು ಇಲಾಖೆಯವರು ಕೊಡಲಿಕ್ಕೆ ಸಾಧ್ಯವಾಗದಿದ್ದರೆ ಈ ಉತ್ತರ ಕೊಟ್ಟ ಅಧಿಕಾರಿ ಯಾರು? ಹಾಗಾದರೆ ಈ ಇಲಾಖೆಯಲ್ಲಿ ಏನೂ ಇನ್‌ಫರ್‌ಮೇಶನ್ ಇಲ್ಲದಿದ್ದರೆ ಈ ದುಡ್ಡು ತೆಗೆದುಕೊಂಡು ಹೋಗಿ ನೀವು ಏನು ಮಾಡುತ್ತೀರಿ. ಮಾನ್ಯ ಅಧ್ಯಕ್ಷರೇ, ಇದು

ಸುಮ್ಮನೆ ತಮಾಷೆಯಾಗಬಾರದು. ಇಲ್ಲಿ ಪ್ರಶ್ನೆಗೆ ಉತ್ತರವನ್ನು ಕೊಡಲಿಕ್ಕೆ ಆಗದೇ ಇದ್ದ ಮೇಲೆ ಬೇಡಿಕೆ ಮೇಲೆ ಚರ್ಚೆಯನ್ನು ಮಾಡಿದಾಗ ಏನು ಉತ್ತರ ಕೊಡುತ್ತಾರೆ ಎನ್ನುವುದು ಬೇಕು. ದಯವಿಟ್ಟು ಈ ಬೇಡಿಕೆ ಬಗ್ಗೆ ಚರ್ಚೆಯಾಗಬೇಕೇ ಬೇಡವೇ ಎನ್ನುವ ಬಗ್ಗೆಯೇ ಚರ್ಚೆಯಾಗಬೇಕು ಎನ್ನುವುದು ನನ್ನ ಬೇಡಿಕೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೇ ತಾವು ಅವಕಾಶವನ್ನು ಕೊಟ್ಟರೆ ಹಿರಿಯ ಸದಸ್ಯರಾದಂತಹ ಮಾನ್ಯ ರಮೇಶ್ ಕುಮಾರ್‌ರವರು ಹೇಳಿರುವಂತಾದ್ದು, ಬಹಳ ಸತ್ಯವಾಗಿದೆ. ಬಹಳ ವಿವರಗಳಿಗೆ ಹೋದರೆ ಬಹಳ ಭಯಾನಕ ಇದೆ. ನಮ್ಮ ರೈತರ ಪರಿಸ್ಥಿತಿ ವಾಸ್ತವಿಕ ಜೀವನದಲ್ಲಿ ನಾವು ಏನು ನೋಡುತ್ತಿದ್ದೇವೆಯೋ ಈ ಇಲಾಖೆಯ ಪರಿಸ್ಥಿತಿ ಅದಕ್ಕಿಂತ ಭಯಾನಕವಾಗಿದೆ. ನಾವು ರೈತರನ್ನು ಸುಧಾರಣೆ ಮಾಡಲಿಕ್ಕೆ ಹೊರಟಂತಹ ರೈತ ಕೃಷಿ ಇಲಾಖೆ ಏನು ಇದೆಯಲ್ಲ ಇದರ ಸುಧಾರಣೆಗೆ ಏನು ಕಾಯಕಲ್ಪ ಮಾಡಬೇಕು ಎನ್ನುವುದು ಬಹಳ ದೊಡ್ಡ ಒಂದು ಸವಾಲು ನಮಗೆ ಇದೆ. ರೈತರಿಗೆ ಒಳ್ಳೆಯದು ಮಾಡುವುದು ಹೋಗಲಿ, ಅವರಿಗೆ ಒಳ್ಳೆಯದು ಮಾಡುವ ಇಲಾಖೆ ಒಳ್ಳೆಯದಾಗುವುದು ಹೇಗೆ ಅಂತಾ.

ಅಧ್ಯಕ್ಷರು: ಹೇಳುವುದಕ್ಕೆ ಏನಾದರೂ ಭಯ ಬಂದಿದೆಯೇ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೇ, ಭಯ ಏನೂ ಇಲ್ಲ. ನಮಗೇನು ಭಯ. ನಾವು ಇನ್ನೂ ಬಹಳ ಹಾಸ್ಯಾಸ್ಪದವಾಗುತ್ತದೆ. ಯೋಜನೆಗಳು ಹೇಗೆ ಇವೆ ಅಂದರೆ ಕೃಷಿ ಇಲಾಖೆಗೆ ನನ್ನ ತಾಲ್ಲೂಕಿಗೆ ಇಲಿ ಕೊಲ್ಲುವುದಕ್ಕೆ ಅಂತ ಒಂದೂವರೆ ಸಾವಿರ ರೂಪಾಯಿ ಯೋಜನೆ ಮಾಡುತ್ತಾರೆ. ಇದು ರಾಜ್ಯವಲಯ, ಜಿಲ್ಲಾ ವಲಯ, ಕೇಂದ್ರ ವಲಯ ಇದೆಲ್ಲಾ ಮಂತ್ರಿಗಳು ಹೇಳಬಹುದು, ಅಂದರೆ ಇಲಾಖೆಯನ್ನು ಇವರು ಹೇಗೆ ನಿರ್ವಹಣೆ ಮಾಡುತ್ತಿದ್ದಾರೆ ಎನ್ನುವುದಕ್ಕೆ ನಾನು ಹೇಳಿದೆ ಅವರಿವರ ಯೋಜನೆಗಳು ಅಂದರೆ ಹಳೆ ಕಾಲದಲ್ಲಿ ಯಾರೋ ಅಜ್ಜ–ಮುತ್ತಜ್ಜನ ಕಾಲದಲ್ಲಿ ಹಾಕಿ ಇಟ್ಟಿರುವ ಯೋಜನೆಗಳು. ಅಪ್ಪನು ಇಟ್ಟ ಆಲದ ಮರ ಅಂತ ಇವರು ಸಹ ಹುರುಳು ಹಾಕಿಕೊಳ್ಳುತ್ತಿದ್ದಾರೆ ಅದಕ್ಕೆ. ಅಂದರೆ ನಾನು ಆಗಲೇ ರೈತ ಸಂಪರ್ಕ ಕೇಂದ್ರದ ಬಗ್ಗೆ ಹೇಳಿದೆ, ಕೃಷಿ ಇಲಾಖೆ ಮಾಡಿರುವಂತಹ ಅತಿ ದೊಡ್ಡ ಬ್ಲಂಡರ್ ಅದು

ಸಂಪರ್ಕ ಕೇಂದ್ರ ಅಂತ ಮಾಡಿರುವುದು. ಅಧಿಕಾರಿಗಳಿಗೆ, ನೌಕರರಿಗೆ ಬಗ್ಗಿ ಸಂಪರ್ಕ ಇಲಾಖಾ ಕೇಂದ್ರಗಳನ್ನು ಇವರು ಮಾಡಿದರು. ನಾನು ಬಹಳ ಕಟುವಾಗಿ ಹಿಂದಿನ ಅಧಿವೇಶನದಲ್ಲಿ ಮಾತನಾಡಿದೆ. ನೀವು ನೌಕರರಿಗೆ ಹೇಗೆ ಬಗ್ಗಿ ಸಂಪರ್ಕ ಕೇಂದ್ರವನ್ನು ಮಾಡಿದ್ದೀರಿ ಅಂತ. ನೌಕರರಲ್ಲಿ ಕೃಷಿ ಸಹಾಯಕರು ಇದ್ದಾರಲ್ಲ. ಅವರು ಒಬ್ಬರೂ ಹಳ್ಳಿಗಳಿಗೆ ಹೋಗುವುದಕ್ಕೆ ಬೇಡ. ಅದಕ್ಕೆ ಇವರು ಸಂಪರ್ಕ ಕೇಂದ್ರ ಮಾಡಿ ಕೊಟ್ಟರು ಅವರೆಲ್ಲರೂ ಆ ನಾಲ್ಕು ಗೋಡೆಗಳ ಮಧ್ಯೆ ಆರಾಮವಾಗಿ ಕುಳಿತುಕೊಂಡು ಬೆಚ್ಚಗೆ ಹರಟೆ ಹೊಡೆಯುತ್ತಾರೆ. ಬೆಳಗ್ಗೆಯಿಂದ ಸಾಯಂಕಾಲದ ತನಕ ಇವರು ಮಲಗಿಕೊಳ್ಳುವವರಿಗೆ ಹಾಸಿಗೆ ಹಾಸಿ ಕೊಟ್ಟಿದ್ದಾರೆ. ಕೃಷಿ ಇಲಾಖೆಯವರು ಅಧಿಕಾರಿಗಳು ಹೇಳಲಿ ಹೇಗೆ ಬೇಕೋ ಆ ರೀತಿ ವ್ಯವಸ್ಥೆಯಾಗುತ್ತದೆ. ರೈತರಿಗೆ ಏನಾದರೂ ಬೇಕು ಅಂತ ಕೇಳಿ ಅವರನ್ನು ಹೇಳುವವರು ಇಲ್ಲ ಕೇಳುವವರು ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ಇದು ಮಾನ್ಯ ಕೃಷಿ ಸಚಿವರಗಮನಕ್ಕೆ ಬರಲಿ. ತಾವು ಒಂದು ಸುತ್ತೋಲೆ ಹೊರಡಿಸಿ. ನಾನು ಏಕೆ ಹೇಳುತ್ತೇನೆ ಅಂದರೆ ನಾವು ಯಾರೋ ಬಂದರೆ ಏನೋ ಕ್ರಾಂತಿಯಾಗಿ ಬಿಡುತ್ತದೆ ಅಂತ ಅಲ್ಲ. ಈ ಒಂದು ಅಧಿಕಾರಿಶಾಹಿ ತಮ್ಮ ವ್ಯವಸ್ಥೆಯಿಂದ ಹೊರ ಬರದೇ ಯಾವುದೇ ಸರ್ಕಾರ ಬಂದರೂ ಅವರ ಚೆಲ್ಲಾಟದಲ್ಲಿಯೇ ನಿರತರಾಗಿದ್ದಾರೆ ಎನ್ನುವುದಕ್ಕೆ ಈಗ ನಮ್ಮ ಮಾನ್ಯ ವಿಶ್ವೇಶ್ವರ ಹೆಗಡೆ ಕೊಟ್ಟಂತಹ ಉದಾಹರಣೆ. ತಾವು ಒಂದು ಸುತ್ತೋಲೆ ಕಳುಹಿಸಿದಿರಿ. ಅವರು ಅಲ್ಲಿ ಕುಳಿತುಕೊಳ್ಳಬಾರದು ವಾರಕ್ಕೆ 5 ದಿವಸ ಓಡಾಟ ಮಾಡಬೇಕು ಅಂತ ಎಲ್ಲಿ ಓಡಾಡುತ್ತಿದ್ದಾರೆ? ಎಲ್ಲಿಯಾದರೂ ತೋರಿಸಿ. ವರ್ಷದಲ್ಲಿ ಒಂದು 3–4 ತಿಂಗಳು ಮಾತ್ರ ಕೃಷಿ ಚಟುವಟಿಕೆಯಾಗುವುದು, ಆ ಸಂದರ್ಭದಲ್ಲೂ ಅವರು ಫೀಲ್ಡ್‌ಗೆ ಹೋಗುವುದಿಲ್ಲ ಎನ್ನುವುದಾದರೆ ತಕ್ಷಣ ಬೆಳೆಗೆ ಯಾವುದೋ ರೋಗ ಬಂತು, ಪೆಸ್ಟಿಸೈಡ್ ಕೊಡಬೇಕು, ಇನ್ನೇನೋ ಅಡ್ವೈಜ್ ಮಾಡಬೇಕು. ಆ ಸಮಯದಲ್ಲಿ ಅವರು ಓಡಾಟ ಮಾಡುವುದಿಲ್ಲ ಎನ್ನುವು ದಾದರೆ ಆ ಇಲಾಖೆಯ ವ್ಯವಸ್ಥೆ ಏತಕ್ಕೆ ಬೇಕು ಅಂತ ನಾನು ಕೇಳುವುದು. ಯಾರು ಇದನ್ನು ಸರಿ ಮಾಡುವುದು ಅಂತ. ನಾವು ಅದಕ್ಕೆ ನಿಮಗೆ ಸಹಕಾರ ಕೊಡುತ್ತಿಲ್ಲವೇ? ನಾವು ಯಾವ ರೀತಿಯ ಸಹಕಾರ ಬೇಕಾದರೂ ಕೊಡುತ್ತೇವೆ. ಅದು ಒಳ್ಳೆಯದು

ಇದೆ ಅಂದರೆ ಆ ಕಡೆ ಕುಳಿತಿರುವ ಶಾಸಕರು ಒಂದು ಅಥವಾ ಎರಡೂ ಯಾವುದಾದರೂ ಉದಾಹರಣೆಗೆ ವಿಶೇಷವಾಗಿ ಇರಬಹುದು ಬಹುತೇಕ ಇದು ಸೋಮಾರಿತನ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೇ, ರೈತ ಸಂಪರ್ಕ ಕೇಂದ್ರದ ಬಗ್ಗೆ ಸರ್ಕಾರ ತನ್ನ ನಿಲುವನ್ನು ಬದಲಿಸಲೇಬೇಕು. ಅವರು ಮೊದಲಿನಂತೆ ಅವರು ರೈತರ ಮಧ್ಯೆ ಇರಬೇಕು. ಅವರು ಕಟ್ಟಡದ ಒಳಗೆ ಇರುವುದಿಲ್ಲ. ಅವರು ರೈತರ ಮಧ್ಯೆ ಇರುವುದನ್ನು ಬಿಟ್ಟು ಇವರು ಕಟ್ಟಡದ ಒಳಗೆ ಕೂಡಿ ಹಾಕಿದರು ಅವರನ್ನು. ಈಗ ಒಂದು ಸರ್ಕ್ಯುಲರ್ ಕೊಡುತ್ತಾರೆ. ಯಾರು ರೈತರ ಮಧ್ಯೆ ಇದ್ದು ನಮ್ಮ ರೈತರು ಎಷ್ಟು ಒಳ್ಳೆಯವರು ಅಂತ ಹೇಳಿದರೆ ನಿಜವಾಗಿಯೂ ನಾವು ಆ ರೈತರ ಬಗ್ಗೆ ಎಷ್ಟು ಹೊಗಳಿಕೆ ಮಾತು ಹೇಳಿದರೂ ಕಡಿಮೆಯೇ. ಅವನ ಕಷ್ಟ ಸುಖ ಏನು ಅಂತ ಕೇಳಿದರೆ ಸಾಕು, ಅವರಿಗೆ ಸಂತೋಷವಾಗಿ ಬಿಡುತ್ತದೆ. ಇವರು ಏನು ಒಂದು ಕತ್ತಿ, ಪಿಕಾಸಿ ಕೊಡುವುದಿಲ್ಲ ಇವರು. ನಮಗೆ ಗೊತ್ತಿದೆ. ಆದರೆ ಯಾರೋ ಒಬ್ಬರು ಇಲಾಖೆ ವತಿಯಿಂದ ಹೋಗಿ ಒಬ್ಬರು ಏನ್ರಪ್ಪಾ ನೀವು ಹೇಗಿದ್ದೀರಿ ಅಂತ ಕೇಳಿದರೆ ಅವರು ಸಂತೋಷಪಡುತ್ತಾರೆ. ಊರು ತುಂಬಾ ಅದನ್ನೇ ಮಾತನಾಡುತ್ತಾರೆ. ಅವನು ಬಂದಿದ್ದನಪ್ಪ ಅವನ ಹತ್ತಿರ ಮಾತನಾಡಿದೆವು ಅಂತ ಆಮೇಲೆ ಇವನು ಮಾಡುವುದು ಅದೇ ಬಿದಿರನ್ನು ತೆಗೆದುಕೊಂಡು ಆ ರೋಗ ನಾಶ ಮಾಡುವುದಕ್ಕೆ ಏನು ಔಷಧಿ ಬೇಕು ಅದನ್ನು ಅವರೇ ಹಳ್ಳಿ ಔಷಧಿಯನ್ನೇ ಮಾಡಿಕೊಳ್ಳುವುದು, ಆದರೆ ಒಬ್ಬ ಗ್ರಾಮ ಸಹಾಯಕ ಬಂದು ಹೋದ ಅಂದರೆ ಅವರು ಸಂತೋಷ ಪಡುತ್ತಾರೆ. ಇವರು ರೈತರಿಗೆ ಮಾನಸಿಕ ವಾದಂತಹ ಸಂತೋಷ ಕೊಡುತ್ತಿದ್ದಂತಹ ಆ ಕೃಷಿ ಸಹಾಯಕರು ಆ ರೈತರ ಮಧ್ಯೆಇರುವುದನ್ನು ಬದಲಿಸಿ ಅವರಿಗೆ ಇಲ್ಲದೇ ಇರುವ ಹೆಸರನ್ನು ಕೊಟ್ಟು ರೈತ ಸಂಪರ್ಕ ಕೇಂದ್ರದಲ್ಲಿ ಕೂಡಿ ಹಾಕಿ ಇಟ್ಟಿರಿ ನೀವು, ಇದು ರೈತರ ಪರ ಇರುವ ಕಾಳಜಿ ಏನು? ರೈತ ಸಂಪರ್ಕ ಕೇಂದ್ರದಲ್ಲಿ ನಡೆಯುತ್ತಿರುವುದನ್ನು ನೋಡಿಬಿಟ್ಟರೆ ಅಲ್ಲಿಸುಣ್ಣ ಪರೀಕ್ಷೆಯಾಗುವುದಿಲ್ಲ. ಅಲ್ಲಿ ಭೂಮಿ ಮಣ್ಣಿನ ಪರೀಕ್ಷೆಯಾಗುವುದಿಲ್ಲ. ಅಲ್ಲಿಗೆ ಬೇಕಾಗಿರುವಂತಹ ಬೀಜ ತಾಲ್ಲೂಕು ಕೇಂದ್ರದಿಂದ ಹಳ್ಳಿಗೆ ಸಪ್ಲೈ ಆಗುವುದಿಲ್ಲ. ಹಳ್ಳಿಗೆ ಸಪ್ಲೈ ಯಾದರೆ ಗೊಬ್ಬರ ಇರಲಿ, ಬೀಜ ಇರಲಿ. ಕ್ರಿಮಿ ನಾಶಕ ಇರಲಿ ಯಾವುದೂ ತಾಲ್ಲೂಕು ಕೇಂದ್ರದಿಂದ ಹಳ್ಳಿಗೆ ಹೋಗುವುದಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅಲ್ಲಿ ಹೋಗಿದ್ದನ್ನು ತಂದುಕೊಳ್ಳುವುದಕ್ಕೆ ರೈತನಿಗೆ ಆಗುವುದಿಲ್ಲ. ಏಕೆಂದರೆ, ಒಂದು ದಿನ ಹೋದಾಗ ಅವನು ಇರುವುದಿಲ್ಲ, ಮತ್ತೊಂದು ದಿನ ರೈತನಿಗೆ ಹೋಗುವುದಕ್ಕಾಗುವುದಿಲ್ಲ. ಇವರು ಹೇಗೆ ಇದ್ದಾರೆಂದರೆ, ರೈತರಿಗೆ ಕೊಡುವುದು ಹೋಗಲಿ, ರೈತ ಸಂಪರ್ಕ ಕೇಂದ್ರಕ್ಕೆ ಹೋಗುವ ದಾರಿ ಎಂದು ಒಂದು ಬೋರ್ಡ್: ಎಲ್ಲಾ ಕಡೆ ಹಾಕಿದ್ದಾರೆ, ಅದಕ್ಕೆ ಎಷ್ಟು ಖರ್ಚಾಯಿತೆಂದು ಮಾನ್ಯ ಸಚಿವರು ಹೇಳಬೇಕು. ರೈತರಿಗೆ ಕೊಡುವುದಕ್ಕಿಂತ ಜಾಸ್ತಿ ಖರ್ಚನ್ನು ರೈತ ಸಂಪರ್ಕ ಕೇಂದ್ರಕ್ಕೆ ಹೋಗುವ ದಾರಿ ಎನ್ನುವ ಬೋರ್ಡ್ ಹಾಕುವುದಕ್ಕೆ ಇವರು ಖರ್ಚು ಮಾಡಿದ್ದಾರೆ. ಆ ರೀತಿ ಬೋರ್ಡ್ ಹಾಕಿರುವುದು ಇದೊಂದೇ ಇಲಾಖೆ ಯಲ್ಲ. ಅನೇಕ ಇಲಾಖೆಗಳಿವೆ. ಇಡೀ ರಾಜ್ಯದ ತುಂಬಾ ಬೋರ್ಡ್‌ಗಳೆಂದರೆ ಎಲ್ಲವನ್ನು ಮಾಡಬೇಕೆಂದಿದ್ದಾರೆ. ಕೃಷಿ ಇಲಾಖೆ ರೈತ ಸಂಪರ್ಕ ಕೇಂದ್ರ ಎಲ್ಲಿದೆ ಎಂದು ನೋಡಿದರೆ ರೈತ ಸಂಪರ್ಕ ಕೇಂದ್ರಕ್ಕೆ ದಾರಿ ಎಂದು ಬೋರ್ಡ್ ಹಾಕಿರುವುದರಿಂದ ಇಪ್ಪತ್ತು ಕಿ.ಮೀ. ದೂರದಲ್ಲಿದೆ. ರೈತ ಸಂಪರ್ಕ ಕೇಂದ್ರಕ್ಕೆ ದಾರಿ ಎಂದು ಒಂದು ಬೋರ್ಡ್ ಹಾಕಿ ಅದಕ್ಕೆ ಕಲ್ಲು ಕಟ್ಟಿ ಕಟ್ಟಿ ಅದಕ್ಕೆ ಬಣ್ಣ ಹಚ್ಚಿದ್ದಾರೆ.

ಶ್ರೀ ಕೆ. ಶ್ರೀನಿವಾಸ ಗೌಡ (ಕೃಷಿ ಸಚಿವರು): ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಸ್ವಾಗತ ಮಾಡುತ್ತೇನೆ, ನಿಮ್ಮ ಸಲಹೆಗಳನ್ನೂ ಕೊಡಿ, ಅದಕ್ಕೆ ಲೋಪಗಳಿದ್ದರೆ ನೀವು ನಾವು ಸೇರಿ ಸರಿಮಾಡೋಣ. ಅವಾಗಲೇ ಮಾನ್ಯ ಸದಸ್ಯರಾದ ರಮೇಶ್ ಕುಮಾರ್‌ರವರು ಒಳ್ಳೆಯ ಸಲಹೆಯನ್ನು ಕೊಟ್ಟರು. ಇದು ಎಪ್ಪತ್ತು ಭಾಗ ಜನಸಂಖ್ಯೆ ಆಧಾರಿತವಾದ ಒಂದು ಕೃಷಿ. ಇದರ ಮೇಲೆ ನೀವು ಮಾತನಾಡಿ. ಯಡಿಯೂರಪ್ಪನವರು ಒಳ್ಳೆಯ ಸಲಹೆಯನ್ನು ಕೊಟ್ಟರು, ನಾನು ಉತ್ತರ ಕೊಡುವಾಗ ಅದಕ್ಕೆ ಹೇಳುತ್ತೇನೆ. ನೀವು, ಇದು ಯಾವರೀತಿಯಾಗಿ ಆಗಬೇಕು, ಅಥವಾ ಆಗದೆ ಇರುವುದಕ್ಕೆ ತಾವು ಯಾವ ರೀತಿಯಾದ ಸಲಹೆಯನ್ನು ಕೊಡುತ್ತಿರೋ ಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ರೈತ ಸಂಪರ್ಕ ಕೇಂದ್ರ ಸೋಮಾರಿಕಟ್ಟೆಯಾಗಿದೆ. ಅದು ಬದಲಾವಣೆಯಾಗುವುದಕ್ಕೆ ನೀವು ಚುರುಕು ಮುಟ್ಟಿಸಬೇಕು. ನೀವು ಸರ್‌ಪ್ರೈಸ್ ವಿಸಿಟ್ ಮಾಡಬೇಕು, ನೀವು ಹೇಳಿದಂತೆ, ಅವನು ವಾರಕ್ಕೆ ಐದು ದಿವಸ ಫೀಲ್ಡ್‌ಗೆ ಹೋದನೋ ಇಲ್ಲವೋ, ಯಾರೂ ವಿಲೇಜ್ ಅಕೌಂಟೆಂಟೂ ಅಥವಾ ಬೇಕಾದ ಪಂಚಾಯಿತಿ ಸದಸ್ಯನೋ ಹತ್ತಿರ

ಸಹಿ ಮಾಡಿಸುತ್ತಾನೆ. ನಿಜವಾಗಿಯೂ ಫೀಲ್ಡ್ ಗೆ ಹೋದನೋ ಇಲ್ಲವೋ ಎನ್ನುವುದನ್ನು ನಿಮ್ಮ ಅಧಿಕಾರಿಗಳಿಗೆ ಗೊತ್ತಾಗುವುದಿಲ್ಲ, ಯಾರೆ ಆದರೂ ಅಷ್ಟು ಸಮರ್ಪಕವಾಗಿ ಆಗುವುದಿಲ್ಲ. ಈಗ ಗೊಂದಲದಲ್ಲಿದ್ದೀರಿ, ಬಿಡುವಿಲ್ಲ, ನಮ್ಮ ಅಧಿಕಾರಿಗಳು ಬೆಂಗಳೂರು ಬಿಟ್ಟು ಹೊರಕ್ಕೆ ಹೋಗುವುದಿಲ್ಲ, ಜಿಲ್ಲಾ ಮಟ್ಟದ ಅಧಿಕಾರಿಗಳು ಹೋಗುತ್ತಾರಾ ಎಂದರೆ ಅವರು ಹೋಗುವುದಿಲ್ಲ. ಯಾರೇ ಅಧಿಕಾರ ನಡೆಸಿದರೂ ಕೂಡ ಒಂದುಸರ್ಕಾರಿ ವ್ಯವಸ್ಥೆ ಆ ಇಲಾಖೆಯವರು ಈ ರೀತಿ ತೊಂದರೆಗೆ ಒಳಗಾಗಿರುವ ಈ ಕ್ಷೇತ್ರದ ಕಡೆಗೆ ಗಮನ ಕೊಡದೆ ಇದ್ದರೆ, ಪ್ರವಾಸ ಮಾಡದೆ ಇದ್ದರೆ ಸರ್‌ಪ್ರೈಸ್ ವಿಸಿಟ್ ಮಾಡದೆ ಇದ್ದರೆ ಯಾವ ಅಧಿಕಾರಿಗಳ ಮೇಲೆ ಯಾರು ರೈತ ಸಂಪರ್ಕ ಕೇಂದ್ರಗಳನ್ನು ಆಕ್ಟಿವ್ ಮಾಡಿ, ಆ ಅಧಿಕಾರಿಗಳು ಫೀಲ್ಡ್‌ಗೆ ಹೋಗುವಂತೆ ಮಾಡಿ, ನಿಮ್ಮ ಜಿಲ್ಲಾ ಮಟ್ಟದ ಅಧಿಕಾರಿಗಳು ಸರ್‌ಪ್ರೈಸ್ ವಿಸಿಟ್ ಮಾಡಿ ಯಾವುದೇ ಮುಲಾಜಿಲ್ಲದೆ, ಅಲ್ಲಿ ಹೋಗಿ ಕೋಳಿ ಕುಯಿಸಿಕೊಂಡು ರಾತ್ರಿ ಊಟ ಮಾಡುವುದಕ್ಕಲ್ಲ ಹೋಗುವಂತಹದ್ದು, ಆದರೆ ಪ್ರಾಮಾಣಿಕವಾದಂತಹ ಸಲಹೆಯನ್ನು, ಕ್ರಮಗಳನ್ನು ಅಧಿಕಾರಿಗಳು ತೆಗೆದುಕೊಳ್ಳಬೇಕಲ್ಲ? ಅದು ಆಗಬೇಕಲ್ಲ? ಅದು ಆಗುವುದಕ್ಕೆ ನೀವೇನು ಮಾಡಿದ್ದೀರಾ? ಈಗ ನಾವು ಹೇಳಿದ್ದು ನಿಜವಾದರೆ, ಏನು ಕ್ರಮ ತೆಗೆದುಕೊಳ್ಳಬೇಕು, ವಿರೋಧಪಕ್ಷ ದವರಾದ ನಾವೇನು ಸಹಕಾರವನ್ನು ಕೊಡಬೇಕು ಹೇಳಿ ನಾವು ಕೊಡುವುದಕ್ಕೆ ಸಿದ್ದರಿದ್ದೇವೆ.

ಅಧ್ಯಕ್ಷರು: ದಿನಾಂಕ:30.06.2005 ರಿಂದ ಪ್ರಾರಂಭವಾಗಿರುವ ಪ್ರಸಕ್ತ ಅಧಿವೇಶನದಲ್ಲಿ ಅನಾರೋಗ್ಯ ಕಾರಣದಿಂದ ಗೈರು ಹಾಜರಾಗಲು ಅನುಮತಿ ನೀಡುವಂತೆ ಮಾನ್ಯ ಸದಸ್ಯರಾದ ಶ್ರೀ.ಯು.ಟಿ.ಫರೀದ್‌ರವರು ಕೋರಿರುತ್ತಾರೆ. ಮಾನ್ಯ ಸದಸ್ಯರು ಗೈರು ಹಾಜರಾಗಲು ಸದನದ ಸಮಿತಿ ಇದೆ ಎಂದು ಭಾವಿಸುತ್ತೇನೆ.

ಗೈರು ಹಾಜರಾಗಲು ಶ್ರೀ ಯು.ಕೆ. ಫರೀದ್‌ರವರಿಗೆ ಅನುಮತಿ ನೀಡಲಾಗಿದೆ. ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಸಂಜೆ 5 ಗಂಟೆ 42 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿ:05.07.2005ರ ಮಂಗಳವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)